**ದಿನಾಂಕಃ 16/06/2026 ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**
**ಮುಂದುವರೆದ ಪಾಟೀ ಸವಾಲು: ಆರೋಪಿತರ ಪರ ಶ್ರೀ ಕೆ ಬಿ ಎಸ್ ವಕೀಲರಿಂದಃ**

1. ಸ. ನಂ. 241 ರಲ್ಲಿ 1 ಎಕರೆ 26 ಗುಂಟೆ ಜಾಗದಲ್ಲಿ ತೆಂಗು, ಅಡಿಕೆ ಮತ್ತು ಬಾಳೆ ಬೆಳೆದಿರುವ ಬಗ್ಗೆ ಆರ್.ಟಿ.ಸಿ. ಯನ್ನು ಹಾಜರುಪಡಿಸಿರುವುದಿಲ್ಲ. ರಾಗಿ ಮತ್ತು ಕಿರಾಣಿ ಪದಾರ್ಥಗಳನ್ನು ಸ. ನಂ. 509 ಮತ್ತು 243 ರಲ್ಲಿ ಬೆಳೆಯುತ್ತಿದ್ದೇನೆ. ಆ ಬಗ್ಗೆ ಆರ್.ಟಿ.ಸಿ. ಯನ್ನು ಹಾಜರುಪಡಿಸಿರುವುದಿಲ್ಲ. ತೆಂಗು, ಅಡಿಕೆ ಮತ್ತು ಬಾಳೆ ಬೆಳೆಯಲು ವಾರ್ಷಿಕವಾಗಿ ಎಷ್ಟು ಖರ್ಚು ಮಾಡುತ್ತೇನೆ ಎಂದು ಹೇಳಲು ಆಗುವುದಿಲ್ಲ. ತೆಂಗು, ಅಡಿಕೆ ಮತ್ತು ಬಾಳೆ ಬೆಳೆಯಲು ವಾರ್ಷಿಕವಾಗಿ 2-3 ಲಕ್ಷ ರೂ ಆಗುತ್ತದೆ ಎಂದರೆ ಸಾಕ್ಷಿಯು ಅಂದಾಜಿನಲ್ಲಿ ಹೇಳಲು ಆಗುವುದಿಲ್ಲ ಎಂದು ನುಡಿಯುತ್ತಾರೆ. ನಾನು 10 ವರುಷದಿಂದ ಹೈನುಗಾರಿಕೆ ಮಾಡುತ್ತಿದ್ದೇನೆ. 2 ಹಸುಗಳನ್ನು ಸಾಕುತ್ತಿದ್ದೇನೆ. 2 ಹಸುಗಳನ್ನು ಸಾಕಿ ಚಪ್ಪರದಹಳ್ಳಿ ಡೈರಿಗೆ ಹಾಲನ್ನು ನೀಡುತ್ತೇನೆ. ಚಪ್ಪರದಹಳ್ಳಿ ಡೈರಿಗೆ ಹಾಲನ್ನು ಹಾಕುತ್ತಿರುವ ಬಗ್ಗೆ ದಾಖಲೆಯನ್ನು ಹಾಜರುಪಡಿಸಿರುವುದಿಲ್ಲ. ಹಸು ಸಾಕಲು ತಿಂಗಳಿಗೆ ಎಷ್ಟು ಖರ್ಚು ಬರುತ್ತದೆ ಎಂದು ಗೊತ್ತಿಲ್ಲ.

2. ಆರೋಪಿತ ನನ್ನ ಊರಿನವರು. ಅವರು 10 ವರುಷದಿಂದ ಪರಿಚಯ ಇದ್ದಾರೆ. ಆರೋಪಿಗೆ ಮತ್ತು ನನಗೆ ಹಣದ ಮಾತುಕತೆ 2024 ನೇ ಇಸವಿಯ ಫೆಬ್ರವರಿ ತಿಂಗಳಿನಲ್ಲಿ ನನ್ನ ಮನೆಯಲ್ಲಿ ಆಗಿರುತ್ತದೆ. ಆ ದಿನ ನನ್ನನ್ನು ಮತ್ತು ಆರೋಪಿತನನ್ನು ಹೊರತುಪಡಿಸಿ ಬೇರೆ ಯಾರು ಇರಲಿಲ್ಲ. ನನಗೆ ಮತ್ತು ಆರೋಪಿತನಿಗೆ ಹಣದ ಮಾತುಕತೆ ಆದ 2 ತಿಂಗಳ ನಂತರ ಆರೋಪಿ ನನ್ನನ್ನು ಬೇಟಿ ಮಾಡಿರುತ್ತಾರೆ. ಆರೋಪಿ 2 ನೇ ಬಾರಿ ನನ್ನನ್ನು ಬೇಟಿ ಮಾಡಿದಾಗ ಹಣವನ್ನು ನೀಡಿರುತ್ತೇನೆ. ದಿಃ 24.04.2024 ರಂದು ಆರೋಪಿ 2 ನೇ ಬಾರಿ ನನ್ನನ್ನು ಬೇಟಿ ಮಾಡಿರುತ್ತಾರೆ. ಮನೆ ಕಡೆ ಸಮಸ್ಯೆ ಇದೆ ಎಂದು ಹೇಳಿ ಆರೋಪಿ ನನ್ನಿಂದ ಕೈ ಸಾಲ ಪಡೆದುಕೊಂಡಿರುತ್ತಾರೆ. ರೂ. 485000/-

ಹಣ ನನ್ನ ಮನೆಯಲ್ಲಿತ್ತು. ಹಣ ನೀಡಿದ 1 ತಿಂಗಳ ನಂತರ ನಾನು ಆರೋಪಿಯನ್ನು ಚಪ್ಪರದಹಳ್ಳಿಯಲ್ಲಿ ಬೇಟಿ ಮಾಡಿರುತ್ತೇನೆ.

3. ಆರೋಪಿಗೆ ಹಣ ನೀಡುವಾಗಲೇ ಆರೋಪಿಯಿಂದ ಚೆಕ್ಕನ್ನು ಪಡೆದುಕೊಂಡಿರುತ್ತೇನೆ. ನಿಪಿ-1 ರಲ್ಲಿ ಆರೋಪಿಯೇ ಬರೆದುಕೊಂಡು ಬಂದು ನನಗೆ ನೀಡಿರುತ್ತಾರೆ. ಆರೋಪಿಗೆ ಹಣ ನೀಡುವಾಗ ನನ್ನ ಮನೆಯಲ್ಲಿ ಯಾರು ಕೂಡ ಇರಲಿಲ್ಲ. ಬ್ಯಾಂಕ್ ನವರು ಹಿಂಬರಹವನ್ನು ದಿಃ 30.04.2024 ರಂದು ನೀಡಿರುತ್ತಾರೆ. ಹಿಂಬರಹವನ್ನು ಪಡೆದುಕೊಂಡ ಎಷ್ಟು ತಿಂಗಳ ನಂತರ ಆರೋಪಿಗೆ ನೋಟೀಸು ನೀಡಿರುತ್ತೇನೆ ಎಂದು ಗೊತ್ತಿಲ್ಲ. ಈ ಪ್ರಕರಣದಲ್ಲಿ ಹಾಜರುಪಡಿಸಿರುವ ನಿಪಿ-1 ಮತ್ತು 2 ದಾಖಲೆಯನ್ನು ಹೊರತು ಪಡಿಸಿ ಉಳಿದ ದಾಖಲೆಗಳ ಬಗ್ಗೆ ನನಗೆ ಮಾಹಿತಿ ಇಲ್ಲ. ನಿಪಿ-1 ರಲ್ಲಿ ಬರೆದಿರುವ ಸಹಿ ಮತ್ತು ಬರವಣಿಗೆಗಳಿಗೆ ವ್ಯತ್ಯಾಸ ಇದೆ ಎಂದರೆ ಸಾಕ್ಷಿಯು ಅವರೇ ಬರೆದುಕೊಂಡು ಬಂದಿರುತ್ತಾರೆ ಎಂದು ನುಡಿಯುತ್ತಾರೆ. ನಿಪಿ-1 ದಾಖಲೆಗೆ ಆರೋಪಿತ ಸಹಿ ಮಾಡಿರುವುದಿಲ್ಲ ಮತ್ತು ಅದರಲ್ಲಿ ಬರೆದಿರುವುದಿಲ್ಲ ಹಾಗೂ ನಾನೇ ಸೃಷ್ಟಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ನಿಪಿ-1 ರಲ್ಲಿ 52 ನೇ ತಿಂಗಳು ಎಂದು ನಮೂದಾಗಿದೆ ಎಂದರೆ ಸಾಕ್ಷಿಯು ವಿದ್ಯಾಭ್ಯಾಸ ಇಲ್ಲ ಎಂದು ನುಡಿಯುತ್ತಾರೆ. ನಿಪಿ-1 ರಲ್ಲಿ ಸಹಿಯನ್ನು ಕನ್ನಡ ಭಾಷೆಯಲ್ಲಿ ಹಾಗೂ ಒಕ್ಕಣೆಯನ್ನು ಆಂಗ್ಲಭಾಷೆಯಲ್ಲಿ ಬರೆಯಲಾಗಿದೆ ಎಂದರೆ ಸರಿ.

4. ನಾನು 5-6 ವರುಷದಿಂದ ಬೆಳೆ ಸಾಲ ಪಡೆಯುತ್ತಿಲ್ಲ. ನಿಪಿ-5 ರಲ್ಲಿ ಆರೋಪಿತನ ಸಹಿ ಇರುವುದಿಲ್ಲ ಎಂದರೆ ಸರಿ. ನಾನು ಆರೋಪಿತನಿಗೆ ತಿಳುವಳಿಕೆ ಪತ್ರವನ್ನು ಕಳುಹಿಸಿರುವುದಿಲ್ಲ ಎಂದರೆ ಸರಿಯಲ್ಲ. ನಿಪಿ-5 ದಾಖಲೆಯನ್ನು ನಾನೇ ಸೃಷ್ಟಿ ಮಾಡಿ ಹಾಜರುಪಡಿಸಿರುತ್ತೇನೆ ಎಂದರೆ ಸರಿಯಲ್ಲ.

5. ಆರೋಪಿತನಿಗೆ 7 ಎಕರೆ ವ್ಯವಸಾಯದ ಜಮೀನು ಇದೆ ಎಂದರೆ ಗೊತ್ತಿಲ್ಲ. ಆರೋಪಿತನಿಗೆ ಆ ಜಮೀನಿನಿಂದ ಸಾಕಷ್ಟು ಆದಾಯ ಇದೆ ಹಾಗೂ ನನ್ನಿಂದ ಸಾಲ ಪಡೆಯುವ ಅವಶ್ಯಕತೆ ಇರುವುದಿಲ್ಲ ಎಂದರೆ ಗೊತ್ತಿಲ್ಲ. ಆರೋಪಿತನಿಗೆ ಸಾಲ ನೀಡುವಷ್ಟು ಅರ್ಥಿಕ ಸಾಮರ್ಥ ನನಗೆ ಇರುವುದಿಲ್ಲ ಎಂದರೆ ಸರಿಯಲ್ಲ. ಆರೋಪಿಯಿಂದ ಹಣ ಪಡೆಯುವ ದುರುದ್ದೇಶದಿಂದ ಈ ಪ್ರಕರಣ ದಾಖಲಿಸಿದ್ದೇನೆ ಎಂದರೆ ಸರಿಯಲ್ಲ. ಆರೋಪಿ ಹೆಂಡತಿ ರಸ್ತೆ ಅಪಘಾತದಲ್ಲಿ ತೀರಿಕೊಂಡಿರುತ್ತಾರೆ ಎಂದು ಪ್ರಕರಣ ದಾಖಲಾಗಿದೆ ಎಂದರೆ ಸಾಕ್ಷಿಯು ಆರೋಪಿತ 2 ನೇ ಮದುವೆ ಆಗಿರುತ್ತಾರೆ ಎಂದು ನುಡಿಯುತ್ತಾರೆ. ಹೆಚ್ಚುವರಿ ಹಿರಿಯ ವಿಭಾಗದ ಸಿವಿಲ್ ನ್ಯಾಯಾಲಯದಲ್ಲಿ ಆರೋಪಿಯ ಮಕ್ಕಳು ಪ್ರಕರಣ ದಾಖಲಿಸಿರುತ್ತಾರೆ ಎಂದರೆ ಗೊತ್ತಿಲ್ಲ. ಆ ಪ್ರಕರಣದಲ್ಲಿ ಆರೋಪಿಗೆ ಹಾಗೂ ಆತನ ಮಕ್ಕಳಿಗೆ ರೂ. 31,00,000/- ಹಣವನ್ನು ಬಡ್ಡಿ ಜೊತೆ ನೀಡಬೇಕು ಎಂದು ಆದೇಶವಾಗಿರುತ್ತದೆ ಎಂದರೆ ಗೊತ್ತಿಲ್ಲ. ಆರೋಪಿ ಆರ್ಥಿಕವಾಗಿ ಸಬಲರಾಗಿದ್ದು ನನ್ನಿಂದ ಯಾವುದೇ ಹಣವನ್ನು ಸಾಲವಾಗಿ ಪಡೆದುಕೊಂಡಿಲ್ಲ ಎಂದರೆ ಸರಿಯಲ್ಲ. ಆರೋಪಿ ನನಗೆ ಚೆಕ್ಕನ್ನು ನೀಡಿರುವುದಿಲ್ಲ ಮತ್ತು ಅದರಲ್ಲಿರುವ ಸಹಿ ಆರೋಪಿತನದ್ದಲ್ಲ ಎಂದರೆ ಸರಿಯಲ್ಲ. ಮುಖ್ಯ ವಿಚಾರಣೆಯಲ್ಲಿ ಹೇಳಿರುವುದು ಎಲ್ಲಾ ಸುಳ್ಳು ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ನನ್ನ ಹೇಳಿಕೆಯಂತೆ ನನ್ನ ಉಕ್ತ ಲೇಖನದ ಪ್ರಕಾರ ಬೆರಳಚ್ಚು ಮಾಡಲಾಯಿತು)

**ಓದಿ ಹೇಳಿ ಕೇಳಿ ಸರಿ ಇದೆ ಎಂದು ಸಾಕ್ಷಿ ಒಪ್ಪಿಕೊಂಡಿರುತ್ತಾರೆ.**

**1 ನೇ ಹೆಃಸಿ.ನ್ಯಾ ಹಾಗೂ ಪ್ರ.ದ.ನ್ಯಾದಂ.**
**ಪಿರಿಯಾಪಟ್ಟಣ.**